# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು.

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


ಫೋನ್ ನಂ: 0821 – 2417106
ಫ್ಯಾಕ್ಸ್ ನಂ: 0821 – 2417105
e-mail:fa@cescmysore.org
CIN:U40109KA2004SGCO35177

ನಿಗಮ ಕಾರ್ಯಾಲಯ,
ನಂ.29, ವಿಜಯ ನಗರ 2ನೇ ಹಂತ,
ಹಿನಕಲ್, ಮೈಸೂರು.570017.


ಕ್ರಮಾಂಕ:ಮುಆಅ/ಪ್ರವ್ಯ/ಉಪ್ರವ್ಯ(ತೆರಿಗೆ)/ಸಪ್ರವ್ಯ(ತೆ)/ಹಿಸ(ತೆ)/18-19/ CYS - 831 ದಿನಾಂಕ: 20 SEP 2018

ಲಗತ್ತು:ಒಂದು ಪುಟ

ಗೆ,

ಮುಖ್ಯ ಇಂಜಿನಿಯರ್ (ವಿ) ವಲಯ ಕಛೇರಿ,
ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ,
ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾ ಮತ್ತು ಪಾ ವಿಭಾಗ,
ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆಂ ನಿ) ನಿಗಮ ಕಛೇರಿ,
ಚಾವಿಸನಿನಿ.

ಮಾನ್ಯರೇ,

**ವಿಷಯ:-** ಜಿ.ಎಸ್.ಟಿ ಸರಕು ಮತ್ತು ಸೇವಾ ತೆರಿಗೆಗಳ ಕಾಯ್ದೆಯಡಿಯಲ್ಲಿ ತೆರಿಗೆ ಮುರುಗಡೆ ಪ್ರಾಧಿಕಾರಗಳು(TDS Authoriseties) ನೋಂದಣಿ ಪಡೆದು ನಿಯಮಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

**ಉಲ್ಲೇಖ:-**1)ಈ ಕಛೇರಿಯಪತ್ರದ ಸಂಖ್ಯೆ:ಮುಲಅ/ಪ್ರವ್ಯ/ಉಪ್ರವ್ಯ(ತೆರಿಗೆ)/ಸಪವ್ಯ(ತೆರಿಗೆ)/ಹಿಸ(ತೆ)/17-18/CYS-1381/ದಿನಾಂಕ.03/02/20183

2)ಅಧೀನ ಕಾರ್ಯದರ್ಶಿ, ಕೇಂದ್ರಿಯ ಅಬಕಾರಿ ಮಂಡಳಿ, ಭಾರತ ಸರ್ಕಾರ ರವರ ಅಧಿಸೂಚನೆ ಸಂಖ್ಯೆ:50/2018-Central Tax(Rate)Dated.13/09/2018.

***********

ದಿನಾಂಕ:01.10.2018 ರಿಂದ ಹಾಗೂ ಮುಂದಿನ ದಿನಗಳಿಂದ ಕಡ್ಡಾಯವಾಗಿ ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯಡಿಯಲ್ಲಿ ಸರಕು ಮತ್ತು ಸೇವೆ ಪೂರೈಕೆಗಳ ಆದೇಶಗಳ ಕರಾರಿನ/ಒಂಪ್ಪದ ಮೌಲ್ಯ ಹಾಗೂ ಮುಂಗಡ ಪಾವತಿಗಳ ಮೊತ್ತ ರೂ2,50,000/-ಕ್ಕಿಂತ ಹೆಚ್ಚಿದಲ್ಲಿ, ಟಿ.ಡಿ.ಎಸ್‌ನ್ನು (51)ರಡಿಯಲ್ಲಿ ಹಾಗೂ ಉಲ್ಲೇಖಿತ(2)ರನ್ವಯ ಕಡ್ಡಾಯವಾಗಿ ಕಡಿತ ಮಾಡಬೇಕಾಗಿರುತ್ತದೆ. ಹಾಗೂ ದಿನಾಂಕ 01.07.2017ರಿಂದ ಜಿ.ಎಸ್.ಟಿ ಅನುಷ್ಠಾನಗೊಂಡ ನಂತರ ಹುಂಡಿಗಳನ್ನು ದಿನಾಂಕ 01.10.2018ರ ನಂತರ ಪಾವತಿಸಿದ್ದಲ್ಲಿ ಅದಕ್ಕೂ ಸಹ ಟಿ.ಡಿ.ಎಸ್ ಮಾಡತಕ್ಕದ್ದು, ಅಂತಃಹ ಹುಂಡಿಗಳಲ್ಲಿ ಟಿ.ಡಿ.ಎಸ್‌ನ್ನು ಕಟಾವು ಮಾಡಿ ನವೆಂಬರ್ 10ರೊಳಗಾಗಿ ಸಕ್ಷಮ ಪ್ರಾಧಿಕಾರಕ್ಕೆ ಆನ್‌ಲೈನ್ ಮೂಲಕ ಪಾವತಿಸಿ ರಿಟರ್ನ್ಸ್ ಫೈಲಿಂಗ್ ಮಾಡತಕ್ಕದ್ದು. ಹಾಗೂ ನವೆಂಬರ್ 15ರೊಳಗಾಗಿ ಕಟಾವಾದ ಮೊತ್ತಕ್ಕೆ ಟಿ.ಡಿ.ಎಸ್ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ಪೂರೈಕೆದಾರರಿಗೆ ವಿತರಿಸತಕ್ಕದ್ದು.

ಈ ಹಿನ್ನಲೆಯಲ್ಲಿ ಉಲ್ಲೇಖಿತ(1)ರ ಸುತ್ತೋಲೆ ಪತ್ರದಲ್ಲಿ ಕಡ್ಡಾಯವಾಗಿ ತಮ್ಮ ವ್ಯಾಪ್ತಿಯ ಸ್ಥಳೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿಯನ್ನು ಸಂಪರ್ಕಿಸಿ, ನೋಂದಣಿ ಪಡೆಯಲು ಸೂಚಿಸಲಾಗಿತ್ತು.


ಪು.ತಿ.ನೋ.

ಆದ್ದರಿಂದ ಈ ಕೆಳಕಂಡಂತೆ ಜಿ.ಎಸ್.ಟಿ ಟಿ.ಡಿ.ಎಸ್ ಲೆಕ್ಕಘಟಕಗಳು ತಮ್ಮ ಹಂತದಲ್ಲಿ ಕಟಾವು ಮಾಡಿ, ಸಕ್ಷಮ ಪ್ರಾಧಿಕಾರಕ್ಕೆ ಪಾವತಿಸಿ, ಕಾಲಕಾಲಕ್ಕೆ ಆನ್‌ಲೈನ್ ಮೂಲಕ ಇ–ಫೈಲಿಂಗ್‌ನ್ನು ಮಾಡಿ ದಾಖಲಾತಿಗಳನ್ನು ನಿರ್ವಹಿಸತಕ್ಕದ್ದು:–

1)ಕೇಂದ್ರಿಯ ಸರಕು ಮತ್ತು ಸೇವಾತೆರಿಗೆ ಶೇ1% (CGST).

2)ರಾಜ್ಯ ಸರಕು ಮತ್ತು ಸೇವಾ ತೆರಿಗೆಗೆ ಶೇ1% (SGST).

3)ಅಂತರಾಜ್ಯ ಪೂರೈಕೆಯಾದಲ್ಲಿ ಶೇ2% (IGST).

ಪ್ರತಿ ತಿಂಗಳು ತಪ್ಪದೇ ಈ ಪ್ರಕ್ರಿಯೆಯನ್ನು ಕೈಗೊಂಡು ಲೆಕ್ಕ ಘಟಕಗಳು ತಮ್ಮ ಹಂತದಲ್ಲೇ ಸೂಕ್ತ ರೀತಿಯಲ್ಲಿ ಸಂಬಂಧಿಸಿದ ದಾಖಲೆಗಳನ್ನು ನಿರ್ವಹಿಸತಕ್ಕದ್ದು. ಹಾಗೂ ಆದಾಯ ತೆರಿಗೆ ಕಾಯ್ದೆ1961ರಡಿ ಯಲ್ಲಿ ಮಾಡುವ ಟಿ.ಡಿ.ಎಸ್ ನಿಯಮಗಳಲ್ಲಿ ಯಾವುದೇ ಬದಲಾವಣೆಯಾಗಿರುವುದಿಲ್ಲ.

ತಪ್ಪಿದಲ್ಲಿ ಸಂಬಂಧಿಸಿದ ಅಧಿಕಾರಿ/ಸಿಬ್ಬಂಧಿಗಳೇ ನೇರ ಹೊಣೆಗಾರರಾಗಿರುತ್ತಾರೆ. ಹಾಗೂ ಹೆಚ್ಚಿನ ವಿವರಗಳಿಗೆ ಈ ಕಛೇರಿಯನ್ನು ಸಂಪರ್ಕಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,

ಮುಖ್ಯ ಆರ್ಥಿಕ ಅಧಿಕಾರಿ.